ಬಾಳೊಂದು ಸುಯೋಗ

ಜಗತ್ತು ಹೇಗಿದೆ ಎಂದು ನೋಡಲಾದರೂ ಸೋಲಿರಿ

ಎಲ್ಲರೂ ಯಶಸ್ಸು ಪಡೆಯಬೇಕೆಂದೇ ಹಂಬಲಿಸುತ್ತಾರೆ. ಸೋಲು ಯಾರಿಗೂ ಬೇಡ. ಸೋಲಿನ ರುಚಿ ಗೊತ್ತಿಲ್ಲದಿದ್ದರೆ ಜೀವನ ಅಪೂರ್ಣ. ಸೋಲಿನ ಮೆಟ್ಟಿಲುಗಳನ್ನು ಹತ್ತಿಯೇ ಗೆಲುವಿನ ಸವಿ ಸವಿಯಬೇಕು. ಸೋಲೇ ಗೆಲುವಿನ ಸೋಪಾನವಾಗಬೇಕು. ಇಲ್ಲದಿದ್ದರೆ ಬದುಕು ಪರಿಪೂರ್ಣ ಎಂದು ಹೇಳಲು ಸಾಧ್ಯವೇ ಇಲ್ಲ. ಗೊತ್ತಿರಲಿ, ಗೆಲುವು ಜಗತ್ತಿಗೆ ನಿಮ್ಮನ್ನು ಪರಿಚಯಿಸುತ್ತದೆ. ಆದರೆ ಸೋಲು ಹಾಗಲ್ಲ, ಅದು ಇಡೀ ಜಗತ್ತನ್ನೇ ನಿಮಗೆ ಪರಿಚಯಿಸುತ್ತದೆ. ಪ್ರಪಂಚ ಹೇಗಿದೆ ಎನ್ನುವುದನ್ನು ನೋಡಲಿಕ್ಕಾದರೂ ನೀವು ಸೋಲು ಕಾಣಬೇಕು. ಏಕಾಏಕಿ ದಕ್ಕುವ ಯಶಸ್ಸು ನಿಮ್ಮನ್ನು ಭ್ರಮಾಲೋಕದಲ್ಲಿ ತೇಲುವಂತೆ ಮಾಡುತ್ತದೆಯೇ ಹೊರತು ವಾಸ್ತವ ಏನು ಎನ್ನುವುದನ್ನು ಅರ್ಥ ಮಾಡಿಸುವುದಿಲ್ಲ. ಕಲ್ಪನೆಯಲ್ಲಿ ಮುಳುಗಿಯೇ ಇಡೀ ಬದುಕು ಕಳೆಯುವುದು ಸಾಧ್ಯವಿಲ್ಲ. ಎಂದಾದರೊಂದು ದಿನ ವಾಸ್ತವವನ್ನು ಎದುರುಗೊಳ್ಳಲೇಬೇಕು. ಅಷ್ಟರಲ್ಲಿ ಸಮಯ ಮಿಂಚಿ ಹೋಗಿ ಪರಿತಪಿಸುವುದಕ್ಕಿಂತಲೂ, ವಾಸ್ತವಕ್ಕೆ ಸನಿಹವಾದ ಬದುಕು ಸಾಗಿಸುವುದರಲ್ಲಿ, ಸೋಲನ್ನೂ ಗೆಲುವಿನಂತೆಯೇ ಭಾವಿಸುವುದರಲ್ಲಿಯೇ ನಿಜವಾದ ಯಶಸ್ಸು ಅಡಗಿದೆ. ಯಾವುದೇ ಪರಿಸ್ಥಿತಿಯನ್ನೂ ಸಮರ್ಥವಾಗಿ ಎದುರಿಸಲು ಅಂತಹ ಮನಸ್ಥಿತಿಯೇ ನಿಮ್ಮನ್ನು ಸಜ್ಜುಗೊಳಿಸಬಲ್ಲದು.

ಜನವಾಣಿ

ಇಂದಿನ ಪ್ರಶ್ನೆ

ವಿವೇಕಾನಂದರ ಹೆಸರನ್ನು ನರೇಂದ್ರ ಮೋದಿ, ಬಿಜೆಪಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂಬ ಕಾಂಗ್ರೆಸ್ ಆರೋಪ ಸರಿಯೇ?

ಹಿಂದಿನ ಪ್ರಶ್ನೆ

ಗೌರಿ ಲಂಕೇಶ್ ಹತ್ಯೆ ಎಡಪಂಥೀಯ ಚಳವಳಿಗೆ ಮರುಹುಟ್ಟು ನೀಡಿದೆಯೇ?

33% 67%

9513374801

YES ಅಥವಾ NO ಎಂದು ಎಸ್ಎಂಎಸ್ ಮೂಲಕ ನಿಮ್ಮ ಅಭಿಪ್ರಾಯ ತಿಳಿಸಿ

ಪ್ರತಿದಿನ ಪ್ರಧಾನಿ



ಪ್ರಧಾನಿ ನರೇಂದ್ರ ಮೋದಿ ಸರಕಾರ ಉಜಾಲ ಯೋಜನೆಯ ಮೂಲಕ ದೇಶದ ಪ್ರತಿ ಗ್ರಾಮಕ್ಕೂ ವಿದ್ಯುತ್ ಪೂರೈಕೆ ಮಾಡುವ ಹಾಗೂ ವಿದ್ಯುತ್ ಉಳಿಸುವ ಮಹತ್ತರ ಕಾರ್ಯಕ್ರಮ ಹಮ್ಮಿಕೊಂಡಿದೆ. ಇದು ಮೇಕ್ ಇನ್ ಇಂಡಿಯಾ ಯೋಜನೆಗೂ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿದೆ. ಮೇಕ್ ಇನ್ ಇಂಡಿಯಾ ಯೋಜನೆ ಮೂಲಕ ದೇಸಿಯವಾಗಿ ಅನೇಕರು ಎಲ್ಇಡಿ ಬಲ್ಬ್ ಉತ್ಪಾದನೆಗೆ ಮುಂದಾಗಿದ್ದಾರೆ. ಇದರಿಂದ ಗ್ರಾಹಕರಿಗೆ ಕೈಗೆಟುವ ಬೆಲೆಯಲ್ಲಿ ಎಲ್ಇಡಿ ದೀಪಗಳು ಸಿಗುತ್ತಿವೆ. ಕೇಂದ್ರ ಸರಕಾರ ಸಬ್ಸಿಡಿ ಮೂಲಕ ಉತ್ಪಾದನೆ ಮತ್ತು ವಿತರಣೆಗೆ ಕೈಜೋಡಿಸಿದೆ. ದೇಶದಲ್ಲಿ ಎಲ್ಇಡಿ ದೀಪಗಳ ಬಳಕೆಯಿಂದ ದೇಶದಲ್ಲಿ ಪ್ರತಿವರ್ಷ 30,554 ಕಿಲೋ ವ್ಯಾಟ್ ವಿದ್ಯುತ್ ಉಳಿತಾಯವಾಗಿದೆ.

ಸ್ವಚ್ಛತೆಯ ಹೊರತಾಗಿ ದೇಶ ಅಭಿವೃದ್ಧಿಗೊಳಿಸಲು ಸಾಧ್ಯವಿಲ್ಲ. ಅಷ್ಟಕ್ಕೂ ಸ್ವಚ್ಛತೆಯೂ ಅಭಿವೃದ್ಧಿಯ ಭಾಗ. ನಾವೂ ಅಭಿವೃದ್ಧಿಯ ಭಾಗವಾಗೋಣ.

-ನರೇಂದ್ರ ಮೋದಿ ಪ್ರಧಾನಿ

ಅತಿರೇಖ

ಶರಣು ಚಟ್ಟಿ

ಗೌರಿ ಹತ್ಯೆ ಖಂಡಿಸಿ ರಾಷ್ಟ್ರೀಯ ಮಟ್ಟದಲ್ಲಿ ಹೋರಾಟ ಕೈಗೊಳ್ಳಲು ಎಡಪಂಥೀಯರ ಸಂಕಲ್ಪ

ಗೌರಿ ಪರ ಘೋಷಣೆ ಮೋದಿ ವಿರುದ್ಧ ದೂಷಣೆ

ಸಮಾವೇಶದಲ್ಲಿ ಕಣ್ಣೀರಿಟ್ಟ ಗೌರಿ ಲಂಕೇಶ್ ತಾಯಿ ಇಂದಿರಾ ಲಂಕೇಶ್.



ಸಮಾವೇಶದಲ್ಲಿ ಕಂಡು ಬಂದ ಖಾಲಿ ಕುರ್ಚಿಗಳು.

ಸೀತೆಯನ್ನು ಕಾಡಿಗೆ ಓಡಿಸಿದವರು, ದ್ರೌಪದಿ ಸೆರಗನ್ನು ಎಳೆದವರೇ ಗೌರಿ ಹತ್ಯೆ ಮಾಡಿದ್ದಾರೆ. ಕಲಬುರ್ಗಿ ಅವರದ್ದು ಧಾರ್ಮಿಕ ಹತ್ಯೆ, ಗೌರಿಯವರದ್ದು ರಾಜಕೀಯ ಹತ್ಯೆ. ಹೆಣ್ಣು ಮಕ್ಕಳನ್ನ ಸೀರೆ ಉಡಿಸಿ ಪೂಜೆ ಮಾಡುವವರು, ನಡುರಸ್ತೆಯಲ್ಲಿ ಗುಂಡಿಟ್ಟು ಕೊಂದರು.

ನಿಡುಮಾಮಿಡಿ ಸ್ವಾಮೀಜಿ

ನಾನು ಈ ಸಮಾವೇಶಕ್ಕೆ ಒಬ್ಬ ಸಚಿವನಾಗಿ ಬಂದಿಲ್ಲ, ಅವರ ಸಹೋದರನಾಗಿ ಬಂದಿದ್ದೇನೆ. ಗೌರಿ ಲಂಕೇಶ್ ಅವರು ಸರಕಾರ - ಸಾಮಾನ್ಯ ಜನರ ನಡುವಿನ ಕೊಂಡಿಯಾಗಿದ್ದರು. ನಿಮ್ಮ ಹೋರಾಟದೊಂದಿಗೆ ನಾವು ಜತೆಯಾಗಿರುತ್ತೇವೆ.

ಯು.ಟಿ.ಖಾದರ್ ಸಚಿವ

ಮೋಹನ್ ಭಾಗವತ್ ಮತ್ತು ಮೋದಿಯ ಎದೆಯ ಮೇಲೆ ಕುಳಿತು ಹೋರಾಡೋಣ. ನ್ಯಾಯ ಸಿಗುವವರೆಗೆ ನಮ್ಮ ಹೋರಾಟ ನಡೆಸೋಣ.

ಜಿಗ್ನೇಶ್ ಮೇವಾನಿ ಸಾಮಾಜಿಕ ಕಾರ್ಯಕರ್ತ

ವಿಚಾರಧಾರೆಗಳ ಬಗ್ಗೆ ಮಾತನಾಡಿದ ಲೀಗಲ್ ನೋಟೀಸ್ ನೀಡುತ್ತಾರೆ. ಇದಕ್ಕೆ ಹೆದರದೆ ಮುಂದಿನ ದಿನದಲ್ಲಿ ದೇಶದಲ್ಲಿ ಬಹು ಸಂಸ್ಕೃತಿ ಉಳಿಸಲು ಹೋರಾಡಬೇಕಿದೆ.

- ನೀಲಾ ಗೌರಿ ಲಂಕೇಶ್ ಹತ್ಯೆ ಹೋರಾಟ ವೇದಿಕೆ ರಾಜ್ಯ ಸಂಚಾಲಕಿ

ಹೇಡಿಗಳ ರೀತಿಯಲ್ಲಿ ಕೋಮುವಾದಿಗಳು ಗೌರಿ ಲಂಕೇಶ್ ಹತ್ಯೆ ಮಾಡಿದ್ದಾರೆ. ಈ ಬೆದರಿಕೆ ತಂತ್ರಕ್ಕೆ ಮಣಿಯದೇ, ನಾವೆಲ್ಲರೂ ಹೋರಾಟ ಮುಂದುವರಿಸಬೇಕಿದೆ. ಅವಳ ಸಾವಲ್ಲಿ ಹೋರಾಟದ ಕಿಚ್ಚು ಹಚ್ಚಬೇಕಿದೆ.

- ತೀಸ್ತಾ ಸೆಟಲ್‌ವಾಡ್ ಸಾಹಿತಿ

ಹಿಂದೆ ನಾನು ದಾಬೋಲ್ಕರ್ ಆಗಿದ್ದೆ, ನಂತರ ನಾನು ಕಲಬುರ್ಗಿಯಾದೆ, ಈಗ ನಾನು ಗೌರಿ ಲಂಕೇಶ್ ಆಗಿದ್ದೇನೆ. ಕರ್ನಾಟಕವೆಂಬ ಸರ್ವಜನಾಂಗದ ಶಾಂತಿಯ ತೋಟದಲ್ಲಿ ಎರಡು ವರ್ಷದ ನಂತರ ಮತ್ತೆ ರಕ್ತ ಚಿಮ್ಮಿದೆ.

ಚಂದ್ರಶೇಖರ ಪಾಟೀಲ್ ಸಾಹಿತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಖಂಡಿಸಿ ನೂರಾರು ವಿಚಾರವಾದಿಗಳು, ಸಾಹಿತಿಗಳು, ಧಾರ್ಮಿಕ ಮುಖಂಡರು ಹಾಗೂ ಚಿಂತಕರು ಮಂಗಳವಾರ ಪ್ರತಿರೋಧ ಸಮಾವೇಶದಲ್ಲಿ ಪಾಲ್ಗೊಂಡು ಹೋರಾಟವನ್ನು ರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವ ಸಂಕಲ್ಪ ಮಾಡಿದರು.

ರಾಷ್ಟ್ರದ ಸಾರಸ್ವತ ಲೋಕದ ವಿವಿಧ ಗಣ್ಯರು ನಡೆಸಿದ ಪ್ರತಿರೋಧ ಸಮಾವೇಶದಲ್ಲಿ ಸಹಸ್ರಾರು ಜನ ಭಾಗವಹಿಸಿ, ಗೌರಿ ಹತ್ಯೆ ಖಂಡಿಸುವುದರೊಂದಿಗೆ ಶೀಘ್ರವೇ ಕೊಲೆ ಹಿಂದಿರುವ ದುಷ್ಟ ಶಕ್ತಿಗಳನ್ನು ಬಂಧಿಸುವಂತೆ ಘೋಷಣೆ ಕೂಗಿದರು.

ಮಂಗಳವಾರ ಬೆಳಗ್ಗೆ 10.30ಕ್ಕೆ ರೈಲ್ವೆ ನಿಲ್ದಾಣದಿಂದ ಆರಂಭವಾದ ರ‍್ಯಾಲಿಯಲ್ಲಿ ಗೌರಿ ಲಂಕೇಶ್ ಕುಟುಂಬಸ್ಥರು ಸೇರಿದಂತೆ ದೇಶದ ಸಾಹಿತಿಗಳು, ಹೋರಾಟಗಾರರು ಹಾಗೂ ಗೌರಿ ಲಂಕೇಶ್ ಅಭಿಮಾನಿಗಳು ಭಾಗವಹಿಸಿ, ಗೌರಿ ಪರ ಘೋಷಣೆ ಕೂಗಿ ಸೆಂಟ್ರಲ್ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರತಿರೋಧ ಸಮಾವೇಶದಲ್ಲಿ ಭಾಗವಹಿಸಿದರು.

ರ‍್ಯಾಲಿಯಲ್ಲಿ ಭಾಗವಹಿಸಿದ್ದ ಸಹಸ್ರಾರು ಮಂದಿ, ನಾನು ಗೌರಿ ಎಂಬ ಭಿತ್ತಿಚಿತ್ರಗಳನ್ನು ಹಿಡಿದು ತಲೆಗೆ ಕಪ್ಪು ಪಟ್ಟಿ ಕಟ್ಟಿಕೊಂಡು ನಾನು ಗೌರಿ.. ನಾವೆಲ್ಲರೂ ಗೌರಿ ಎಂಬ ಘೋಷ ವಾಕ್ಯ ಹೇಳುತ್ತ, ಸಮಾವೇಶದ ಸ್ಥಳಕ್ಕೆ ಆಗಮಿಸಿದರು. ಸಾಂಸ್ಕೃತಿಕ ತಂಡಗಳು, ಜಾನಪದ ತಂಡಗಳೊಂದಿಗೆ, ಭಜನೆ, ಗೌರಿ ಪರವಾದ ಗೀತರೂಪಕಗಳನ್ನು ಹಾಡುತ್ತಾ ಮೆರವಣಿಗೆಯಲ್ಲಿ ಸಾಗಿ ಪತ್ರಕರ್ತೆ ಹತ್ಯೆಯನ್ನು ಖಂಡಿಸಿದರು.

ತಾಯಿ ಕಣ್ಣೀರು: ರ‍್ಯಾಲಿ ನಂತರ ಸಭಾ ಕಾರ್ಯಕ್ರಮಕ್ಕೆ ಗೌರಿ ಲಂಕೇಶ್ ತಾಯಿ ಇಂದಿರಾ ಲಂಕೇಶ್, ಸಹೋದರಿ ಕವಿತಾ ಲಂಕೇಶ್ ಹಾಗೂ ಪುತ್ರಿ ಇಶಾ ಲಂಕೇಶ್ ಆಗಮಿಸುತ್ತಿದ್ದಂತೆ ಸ್ಥಳದಲ್ಲಿದ್ದ ಪ್ರತಿಯೊಬ್ಬರು ಗೌರಿ ಪರ ಘೋಷಣೆ ಕೂಗಿದರು. ಈ ವೇಳೆ ಇಂದಿರಾ ಹಾಗೂ ಕವಿತಾ ಲಂಕೇಶ್ ಅವರು ಭಾವುಕರಾಗಿ ಕಣ್ಣೀರು ಸುರಿಸಿದರು.

ಪ್ರತಿರೋಧ ಸಮಾವೇಶದಲ್ಲಿ ಗೌರಿ ಲಂಕೇಶ್ ನೆನಪಿನ ವಿಶೇಷಾಂಕವನ್ನು ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್ ದೊರೆಸ್ವಾಮಿ, ಇಂದಿರಾ ಲಂಕೇಶ್, ಕವಿತಾ ಲಂಕೇಶ್ ಬಿಡುಗಡೆಗೊಳಿಸಿದರು. ಈ ವೇಳೆ ಸಾಹಿತಿ ಚಂದ್ರಶೇಖರ ಪಾಟೀಲ್, ದೇವನೂರು ಮಹಾದೇವ, ಸೀತಾರಾಂ ಯೆಚೂರಿ, ಪತ್ರಕರ್ತ ಪಿ. ಸಾಯಿನಾಥ್, ಸ್ವಾಮಿ ಅಗ್ನಿವೇಶ್, ಸಾಗರೀಕ ಘೋಷ್, ನಿಜಗುಣಾನಂದ ಸ್ವಾಮಿ, ಬಿ.ಟಿ ಲಲಿತಾ ನಾಯಕ್, ತೀಸ್ತಾ ಸೆಟ್ಲವಾಡ್ ಇದ್ದರು.

ಧಾರ್ಮಿಕ ಮುಖಂಡರಿಗೂ ಕೊಲೆ ಬೆದರಿಕೆ: ಶಿವಮೂರ್ತಿ ಮುರುಘಾ ಶರಣರು: ವಿಚಾರವಾದಿಗಳೊಂದಿಗೆ ಧಾರ್ಮಿಕ ಮುಖಂಡರಿಗೂ ಜೀವ ಬೆದರಿಕೆಯಿದೆ ಎಂದು ಚಿತ್ರದುರ್ಗ ಮುರುಘ ಮಠದ ಶ್ರೀ ಶಿವಮೂರ್ತಿ ಮುರುಘಾ ಶರಣರು ಆತಂಕ ವ್ಯಕ್ತಪಡಿಸಿದರು.

ವಿಚಾರವಾದಿಗಳನ್ನು ಗುರಿಯಾಗಿಸಿಕೊಂಡು ಕೊಲೆ ನಡೆಯುತ್ತಿವೆ. ಇದರೊಂದಿಗೆ ಸಮಾನತೆ ಬಗ್ಗೆ ಮಾತನಾಡುವ ಧಾರ್ಮಿಕ ಮುಖಂಡರಿಗೂ ಜೀವ ಬೆದರಿಕೆಯಿದೆ. ಕೆಲ ತಿಂಗಳ ಹಿಂದೆ ನನಗೂ ಬೆದರಿಕೆ ಕರೆಗಳು ಬಂದಿದ್ದವು. ಪ್ರಗತಿಪರವಾಗಿ ಧ್ವನಿ ಎತ್ತುವ ಪ್ರತಿಯೊಬ್ಬರ ಜೀವಕ್ಕೂ ಕುತ್ತಿದೆ. ಆದರೆ ಪ್ರಗತಿಪರ ಚಿಂತಕರಿಗೆ ಸಿಗುವ ಮಾನ್ಯತೆ ಧಾರ್ಮಿಕ ಮುಖಂಡರ ಜೀವಕ್ಕೆ ಸಿಗುತ್ತಿಲ್ಲ. ಇನ್ನು ಮುಂದಾದರೂ, ನಾವೆಲ್ಲರೂ ಒಂದಾಗಿ ಹೋರಾಡುವುದರೊಂದಿಗೆ ಪರಸ್ಪರ ಸಹಾಯ ಮಾಡಬೇಕೆಂದು ಆಶಿಸಿದರು.

ಗೌರಿ ಲಂಕೇಶ್ ಅವರನ್ನು ಹತ್ಯೆ ಮಾಡಿದವರು, ಗೌರಿ ಅವರ ವಿಚಾರವಾದವನ್ನು ಎದುರಿಸಲು ಸಾಧ್ಯವಾಗದೇ ಬಂದೂಕಿನಿಂದ ಹತ್ಯೆ ಮಾಡಿದ್ದಾರೆ. ವಿಚಾರಕ್ಕೆ ವಿಚಾರದಿಂದಲೇ ಅಹಿಂಸಾ ಮಾರ್ಗದಲ್ಲಿ ಉತ್ತರಿಸಬೇಕು ಹೊರತು ಬಂದೂಕಿನಿಂದಲ್ಲ. ಆದರೆ ಇಂದಿನ ದಿನದಲ್ಲಿ ವಿಚಾರ ವಿರೋಧಿಸಿದರೆ ಬಾಡಿಗೆ ಕೊಲೆಗಡುಕರನ್ನು ಬಿಟ್ಟು ಹತ್ಯೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಜಾತಿ ನಾಶವಾಗದಿದ್ದರೆ ದೇಶಕ್ಕೆ ಭವಿಷ್ಯವಿಲ್ಲ: ನಿಜಗುಣಾನಂದ ಸ್ವಾಮೀಜಿ: ತೋಂಟದಾರ್ಯ ಮಠದ ನಿಜಗುಣಾನಂದ ಸ್ವಾಮೀಜಿ ಮಾತನಾಡಿ, ದೇಶದಲ್ಲಿರುವ ಜಾತಿವಾದ, ಪುರೋಹಿತಶಾಹಿ ವ್ಯವಸ್ಥೆ ನಾಶವಾಗುವ ತನಕ ದೇಶಕ್ಕೆ ಭವಿಷ್ಯವಿಲ್ಲ. ದಲಿತ, ಅಲ್ಪಸಂಖ್ಯಾತರ, ರೈತರ, ಮಹಿಳೆಯರ ಧ್ವನಿಯಾಗಿದ್ದ ಗೌರಿ ಲಂಕೇಶ್ ಅವರ ಹತ್ಯೆಯನ್ನು ಖಂಡಿಸಬೇಕು ಎಂದರು. ಬುದ್ಧ, ಬಸವನನ್ನು ಓಡಿಸಿದ ಈ ಸನಾತನ ವಾದಿಗಳನ್ನು ಹೇಗೆ ನಿರ್ಮೂಲನೆ ಮಾಡಬೇಕೆಂದು ಪ್ರತಿಯೊಬ್ಬರು ಚಿಂತಿಸಬೇಕೆಂದು ಹೇಳಿದರು.

ಪ್ರಜಾಪ್ರಭುತ್ವ ಉಳಿಸಲು ಸಿದ್ಧರಾಗಿ: ಯೆಚೂರಿ

ದೇಶದ ಪ್ರಜಾಪ್ರಭುತ್ವ ಉಳಿಸಲು ಪ್ರತಿಯೊಬ್ಬರು ಯೋಧರಂತೆ ಸಿದ್ಧರಾಗಬೇಕು. ವೈವಿಧ್ಯ ಭಾರತವನ್ನು ಉಳಿಸುವ ನಿಟ್ಟಿನಲ್ಲಿ ಹೋರಾಡಬೇಕು ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ತಿಳಿಸಿದರು. ಇಂದಿನ ದಿನದಲ್ಲಿ ದೇಶದ ಮೂಲ ವಿಚಾರ ವೈವಿಧ್ಯಕ್ಕೆ ಧಕ್ಕೆ ಬಂದಿದೆ. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಬಗ್ಗೆ ಮಾತಿನಲ್ಲಿ ಸಮರ ನಡೆಸಬೇಕೆ ಹೊರತು ಬಂದೂಕಿನಿಂದಲ್ಲ. ಅಂಬೇಡ್ಕರ್ ಅವರು ಭಾರತ ಸಂವಿಧಾನದಲ್ಲಿ ಸಮಾನತೆ, ಸಾಮರಸ್ಯ ಭಾರತದ ಕನಸು ಕಂಡಿದ್ದರು. ಆದ್ದರಿಂದ ಆದರ್ಶ ಭಾರತ ಉಳಿದಿಲ್ಲ. ವೈಚಾರಿಕ ಭಿನ್ನಾಭಿಪ್ರಾಯಗಳಿಗೆ ಬಂದೂಕಿನಲ್ಲಿ ಉತ್ತರಿಸುತ್ತಿರುವುದು ದೇಶದ ದುರಂತ ಎಂದರು.

ಗೋರಕ್ಷಣೆಯ ಹೆಸರಲ್ಲಿ ಮುಸ್ಲಿಂರ ಹತ್ಯೆ, ನೈತಿಕ ಪೊಲೀಸ್‌ಗಿರಿ ನಡೆಸುವುದು ಮೂಲ ಭಾರತದ ಆಶಯಕ್ಕೆ ವಿರುದ್ಧವಾಗಿರುವ ಅಂಶಗಳು. ಹಿಂದುತ್ವದ ಹೆಸರಲ್ಲಿ ಪ್ರಜಾಪ್ರಭುತ್ವಕ್ಕೆ ಕೆಲವರು ಅಡ್ಡಿ ಉಂಟುಮಾಡಿದ್ದಾರೆ. ಅಲ್ಪಸಂಖ್ಯಾತರಿಗೆ ಸಾಮಾಜಿಕ ನ್ಯಾಯ ನೀಡಬೇಕೆಂದು ಸ್ವಾತಂತ್ರ್ಯ ನಂತರ ಮೊದಲು ಧ್ವನಿ ಎತ್ತಿದ್ದು ಮಹಾತ್ಮ ಗಾಂಧೀಜಿ. ಅವರ ಹತ್ಯೆ ಯಾರೂ ಮಾಡಿದ್ದಾರೆ ಎಂಬುದು ದೇಶಕ್ಕೆ ಗೊತ್ತು. ಗೌರಿ ಹತ್ಯೆಯಲ್ಲೂ ಅವರದ್ದೇ ಕೈವಾಡವಿದೆ ಎಂದು ಆರೋಪಿಸಿದರು.

ಆದರ್ಶ ದೇಶ ನಿರ್ಮಿಸುವ ನಿಟ್ಟಿನಲ್ಲಿ ಗೌರಿ ಲಂಕೇಶ್ ಅವರು ಸಕ್ರಿಯವಾಗಿದ್ದರು. ಆದ್ದರಿಂದಲೇ ಕೆಲ ದುಷ್ಟ ಶಕ್ತಿಗಳು ಅವರನ್ನು ಕೊಂದರು. ಆದರೆ ಗೌರಿ ಅವರನ್ನು ಕೊಂದ ಮಾತ್ರಕ್ಕೆ ಅವರ ವಿಚಾರಧಾರೆಗಳು ಅಂತ್ಯವಾಗುವುದಿಲ್ಲ. ಸಮಾವೇಶದಲ್ಲಿ ಭಾಗವಹಿಸಿರುವ ಪ್ರತಿಯೊಬ್ಬರು ಅವರ ವಿಚಾರಧಾರೆಗಳನ್ನು ಮುಂದುವರಿಸಿಕೊಂಡು ಹೋಗುವ ಮೂಲಕ ಸಾವಿರಾರು ಧ್ವನಿಗಳಾಗಿ ಹೋರಾಡಬೇಕಿದೆ ಎಂದರು.

ಸಮಾವೇಶದ ನಿರ್ಣಯ

ಗೌರಿ ಲಂಕೇಶ್ ಹತ್ಯೆ ಸೇರಿದಂತೆ ವಿಚಾರವಾದಿಗಳ ಹಂತಕರ ಜಾಲವನ್ನು ಪತ್ತೆಹಚ್ಚುವಂತೆ ಸರಕಾರವನ್ನು ಸಮಗ್ರವಾಗಿ ಒತ್ತಾಯಿಸಲು ಪ್ರತಿರೋಧ ಸಮಾವೇಶ ನಿರ್ಣಯ ತೆಗೆದುಕೊಂಡು ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಕೆ ಮಾಡಿದೆ. ಗೌರಿ ಲಂಕೇಶ್ ಹತ್ಯೆ ಪ್ರಕರಣದ ತನಿಖೆ ನಡೆಸಲು ರಾಜ್ಯ ಸರಕಾರ ರಚಿಸಿರುವ ಎಸ್ಐಟಿ ಮೂಲಕ, ಹಂತಕರನ್ನು ಹಾಗೂ ಅವರಿಗೆ ಕುಮ್ಮಕ್ಕು ನೀಡಿದ ದುಷ್ಟ ಶಕ್ತಿಗಳನ್ನು ಪತ್ತೆ ಮಾಡಬೇಕು ಎಂದು ಒತ್ತಾಯಿಸಲಾಗಿದೆ. ಕಳೆದ ಒಂದುವರೆ ದಶಕದಿಂದ ಸಂವಿಧಾನ ಹಾಗೂ ಮಾನವತೆ ವಿರೋಧಿಗಳನ್ನು ವಿರೋಧಿಸುತ್ತ ಬಂದಿದ್ದ ಗೌರಿ ಲಂಕೇಶ್ ಹತ್ಯೆಯನ್ನು ಆರ್‌ಎಸ್‌ಎಸ್, ಬಜರಂಗದಳ, ವಿಎಚ್‌ಪಿ, ಶ್ರೀರಾಮಸೇನೆ ಸಂಘಟನೆಗಳ ಸದಸ್ಯರು ಸಂಭ್ರಮಿಸಿದ್ದರು. ಇನ್ನು ಕೆಲ ಬಿಜೆಪಿ ನಾಯಕರು ಹತ್ಯೆಯನ್ನು ಪರೋಕ್ಷವಾಗಿ ಸಮರ್ಥಿಸಿಕೊಂಡಿರುವುದು ಕಾಣುತ್ತಿದೆ. ಇಂತಹ ಧರ್ಮ ವಿರೋಧಿ ಧೋರಣೆಗಳನ್ನು ಖಂಡಿಸುವುದರೊಂದಿಗೆ, ಈ ರೀತಿಯ ಮನಸ್ಥಿತಿಯನ್ನು ನಿರ್ಮೂಲನೆ ಮಾಡಲು ರಾಜ್ಯ ಸರಕಾರ ಕಠಿಣ ಕ್ರಮ ಕೈಗೊಳ್ಳಬೇಕೆಂದು ವೇದಿಕೆ ಆಗ್ರಹಿಸಿತು.

ದೇಶದಲ್ಲಿ ಕೋಮುವಾದಿ ಶಕ್ತಿಗಳು ಹೆಚ್ಚಾಗುತ್ತಿದ್ದು, ಪ್ರಜಾಪ್ರಭುತ್ವದ ಧ್ವನಿ ಅಡಗಿಸಲು ವಿಚಾರವಾದಿಗಳನ್ನು ಹತ್ಯೆ ಮಾಡಲಾಗುತ್ತಿದೆ. ಇದನ್ನು ವಿರೋಧಿಸುವ ನಿಟ್ಟಿನಲ್ಲಿ ಆರಂಭವಾಗಿರುವ ಪ್ರತಿರೋಧ ಸಮಾವೇಶ ಮುಂದಿನ ದಿನದಲ್ಲಿ ರಾಜ್ಯದ ಜಿಲ್ಲಾ, ತಾಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಆಯೋಜಿಸಬೇಕು. ಈ ಮೂಲಕ ದೇಶದಲ್ಲಿರುವ ಕೋಮುವಾದವನ್ನು ನಿರ್ಮೂಲನೆ ಮಾಡಲು ಪ್ರತಿಯೊಬ್ಬರು ಸಿದ್ಧರಾಗಬೇಕು ಎಂದು ನಿರ್ಣಯದ ಪಟ್ಟಿಯಲ್ಲಿ ಆಶಿಸಲಾಗಿದೆ.

ಮೋದಿಯವರೇ ಎಲ್ಲಿದ್ದೀರಾ?: ಮೇಧಾ ಪಾಟ್ಕರ್

ದೇಶದಲ್ಲಿ ನಡೆಯುವ ಸಣ್ಣ ದುರಂತಗಳಿಗೂ ಸಂತಾಪ ಸೂಚಿಸುವ ಪ್ರಧಾನಿ ನರೇಂದ್ರ ಮೋದಿ ಅವರು ಗೌರಿ ಹತ್ಯೆಯಾದಾಗ ಎಲ್ಲಿದ್ದರು ಎಂದು ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಪ್ರಶ್ನೆ ಮಾಡಿದರು. ಸಾಮಾಜಿಕ ಜಾಲತಾಣದಲ್ಲಿ ಸದಾ ಸಕ್ರಿಯವಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಗೌರಿ ಲಂಕೇಶ್ ಹತ್ಯೆ ವಿಷಯದಲ್ಲಿ ಮಾತ್ರ ಇಲ್ಲಿಯವರೆಗೆ ಪ್ರತಿಕ್ರಿಯೆ ನೀಡಿಲ್ಲ. ಸಣ್ಣ ವಿಚಾರಗಳ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಳ್ಳುವ ಪ್ರಧಾನಿಗಳು ಈ ವಿಚಾರದಲ್ಲಿ ಏಕೆ ಮೌನವಾಗಿದ್ದಾರೆ ಎಂದು ಪ್ರಶ್ನಿಸಿದರು.

ಜಾತಿ, ಲಿಂಗಬೇಧ ಮರೆತು, ಅಲ್ಪ ಸಂಖ್ಯಾತ, ದಲಿತರ ಸಾಮಾಜಿಕ ನ್ಯಾಯಕ್ಕಾಗಿ ಪ್ರತಿಯೊಬ್ಬರು ಹೋರಾಡಬೇಕಿದೆ ಎಂದು ಹೇಳಿದರು.

ಶರಣಾದ ಸಿರಿಮನೆಗೇಕೆ ಮತ್ತೆ ನಕ್ಸಲರ ಹಂಗಿನ ಅರಮನೆ?

← ಮೊದಲಪುಟದಿಂದ

ಆದರೆ, ಪ್ರಗತಿಪರರ ಈ ಪ್ರಯತ್ನ ಸಫಲವಾಗದೇ ಮಾಧ್ಯಮಗಳಲ್ಲಿ ಗೌರಿಯವರ ಹತ್ಯೆಯ ಹಿಂದೆ ನಕ್ಸಲರ ಕೈವಾಡವಿರುವ ಶಂಕೆ ವ್ಯಕ್ತವಾಗುತ್ತಿದ್ದಂತೆ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು ಆ ದಿಕ್ಕಿನಲ್ಲಿಯೂ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿ ಹತ್ಯೆಯಲ್ಲಿ ನಕ್ಸಲರ ಕೈವಾಡದ ಸಾಧ್ಯಾಸಾಧ್ಯತೆಗಳ ಬಗ್ಗೆಯೂ ಪರಿಶೀಲನೆ ನಡೆಸಲು ಆರಂಭಿಸಿದ್ದವರು. ಆರಂಭದಲ್ಲಿ ಗೌರಿ ಲಂಕೇಶ್ ಹತ್ಯೆಯನ್ನು ಸಂಘಪರಿವಾರದವರ ಅಥವಾ ಕರ್ಮಠ ಹಿಂದುತ್ವವಾದಿಗಳ ತಲೆಗೆ ಕಟ್ಟಿ ಅವರನ್ನು ರಾಜ್ಯದಲ್ಲಿ ರಾಜಕೀಯವಾಗಿ ಹಣಿಯಲು ಯತ್ನಿಸಿದ ಪ್ರಗತಿಪರರಿಗೆ ಪೊಲೀಸರ ಮತ್ತು ಮಾಧ್ಯಮಗಳಲ್ಲಿನ ವರದಿ ತಲೆ ನೋವಾಗಿ ಪರಿಣಮಿಸಿತ್ತು.

ಈ ಮಧ್ಯೆ ಎಸ್ಐಟಿ ಪೊಲೀಸರು ಆಂಧ್ರದ ನಕ್ಸಲ್ ನಿಗ್ರಹ ದಳದ ಅಧಿಕಾರಿಗಳೊಂದಿಗೆ ನಕ್ಸಲ್ ಹತ್ಯೆಗಳ ಹಿಂದಿನ ಮಾಹಿತಿ ಹಂಚಿಕೊಳ್ಳುತ್ತಿದ್ದಂತೆ ದಿಗಿಲಿಗೆ ಬಿದ್ದ ರಾಜ್ಯದ ಪ್ರಗತಿಪರರು ಅದರಲ್ಲೂ ಗೌರಿ ಲಂಕೇಶ್ ಆಪ್ತರು ನೇರವಾಗಿ ಹೋಗಿ ಅಲವತ್ತುಕೊಂಡಿದ್ದು ಮಾಜಿ ನಕ್ಸಲರಾದ ಸಿರಿಮನೆ ನಾಗರಾಜ್ ಮತ್ತು ನೂರ್ ಜುಲ್ಫಿಕರ್ ಅವರನ್ನು. ಗೌರಿ ಆಪ್ತರ ಆಣತಿಯಂತೆ ಸೆ.11ರ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಇವರು ನೇರವಾಗಿ ಗೌರಿಯ ಹತ್ಯೆಯ ಹೊಣೆಯನ್ನು ಸಂಘಪರಿವಾರದವರ ಹಣೆಗೆ ಕಟ್ಟಲು ಯತ್ನಿಸಿದ್ದಾರೆ.

ಇದೇ ವೇಳೆ ನಮ್ಮ ಸಂಘಟನೆ ಯಾವುದೇ ಹತ್ಯೆ ಮಾಡುವುದಿದ್ದರೆ ಟಾರ್ಗೆಟ್ ಆಗಿರುವವರಿಗೆ ಎರಡು ಬಾರಿ ಎಚ್ಚರಿಕೆ ನೀಡಿ ಆ ನಂತರ ಹತ್ಯೆ ಮಾಡಲಾಗುತ್ತದೆ. ಗೌರಿಯವರೊಂದಿಗೆ ಸಂಘಟನೆಯ ಸದಸ್ಯರಿಗೆ ಯಾವುದೇ ಸೈದ್ಧಾಂತಿಕ ಭಿನ್ನಾಭಿಪ್ರಾಯವಿರಲಿಲ್ಲ, ಅವರ ಬಗ್ಗೆ ನಕ್ಸಲರಿಗೆ ಅಭಿಮಾನವಿತ್ತು ಎಂದು ಹೇಳುವ ಮೂಲಕ ಶರಣಾಗಿ ಸಮಾಜದ ಮುಖ್ಯವಾಹಿನಿಗೆ ಬಂದರು ತಾವು ನಕ್ಸಲರ ಪರ ಎಂದು ಬಹಿರಂಗವಾಗಿ ತೋರ್ಪಡಿಸಿಕೊಂಡಿದ್ದಾರೆ.

ಸರಕಾರದ ಮುಂದೆ ಶರಣಾಗುವಾಗ ನಕ್ಸಲ್ ಸಂಘಟನೆಯೊಂದಿಗೆ ನಮಗೆ ಸಂಬಂಧವಿಲ್ಲ ಎಂದಿದ್ದ ಸಿರಿಮನೆ ನಾಗರಾಜ್ ಮತ್ತು ನೂರ್‌ಜುಲ್ಫಿಕರ್ ಈಗ ನಮ್ಮ ನಕ್ಸಲ್ ಸಂಘಟನೆ ಎಂದು ಹೇಳುತ್ತಿರುವುದು ಎಷ್ಟರ ಮಟ್ಟಿಗೆ ಸರಿ. ಶರಣಾಗಿ ಸಮಾಜದ ಮುಖ್ಯವಾಹಿನಿಗೆ ಬಂದರು ಅವರಿನ್ನೂ ನಕ್ಸಲರರೊಂದಿಗಿನ ಸಂಬಂಧ ಬಿಟ್ಟಿಲ್ಲವೇ? ಇಲ್ಲ ಶರಣಾಗತಿಯ ನಾಟಕವಾಡಿ ಮುಖ್ಯವಾಹಿನಿಯಲ್ಲಿದ್ದಕೊಂಡೇ ನಕ್ಸಲ್ ಚಳವಳಿಗೆ ಯುವಕರನ್ನು ಸೆಳೆಯುವ ಪ್ರಯತ್ನವನ್ನು ಇವರು ಮಾಡುತ್ತಿದ್ದಾರೆಯೇ ಎಂಬ ಅನುಮಾನ ಈಗ ಸಾರ್ವಜನಿಕರನ್ನು ಕಾಡುತ್ತಿದೆ.

ವೀರಶೈವ, ಲಿಂಗಾಯತ ಒಂದೇ

← ಮೊದಲಪುಟದಿಂದ

ಆದರೆ ಮಾನ್ಯಶ್ರೀ ಎಂ.ಬಿ.ಪಾಟೀಲ್ ಅವರು ಲಿಂಗಾಯತ ಪದದ ಪರವಾಗಿ ಬೆಂಬಲ ಸೂಚಿಸಿದ್ದಾರೆ ಎಂಬಂತೆ ಮಾಧ್ಯಮಗಳಲ್ಲಿ ಪ್ರಕಟಿಸಿರುವುದು ತಿಳಿದುಬಂದಿದೆ. ಸಮಾಜವನ್ನು ಈ ರೀತಿ ಇಬ್ಭಾಗ ಮಾಡುವ ರೀತಿಯಲ್ಲಿ ಯಾರೇ ಪ್ರಯತ್ನಿಸಿದರೂ ಸಮಾಜದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಸಮಾಜದ ಮುಖಂಡರೆಲ್ಲ ಕುಳಿತು ಚರ್ಚಿಸಿ ಒಮ್ಮತ ರೂಪಿಸುವುದು ಅತ್ಯಂತ ಅಗತ್ಯವಾಗಿದೆ'.

ಸಿದ್ಧಗಂಗಾ ಶ್ರೀಗಳ ಸ್ಪಷ್ಟೋಕ್ತಿ ನಂತರ ಅಂತಿಮ ಹಂತಕ್ಕೆ ಪ್ರತ್ಯೇಕ ಧರ್ಮದ ಹೋರಾಟ

ಧರ್ಮದ ಜಿಜ್ಞಾಸೆಗೆ ಶೀಘ್ರವೇ ತೆರೆ

ವಿಶ್ವವಾಣಿ ಸುದ್ದಿಮನೆ ತುಮಕೂರು

ವೀರಶೈವ ಲಿಂಗಾಯತರಲ್ಲಿ ಯಾವುದೇ ಭೇದ ಭಾವ ಇಲ್ಲ, ಎರಡೂ ಒಂದೇ ಎಂದು ಸಿದ್ಧಗಂಗಾ ಮಠಾಧೀಶರಾದ ಶಿವಕುಮಾರ ಸ್ವಾಮೀಜಿಗಳು ಸ್ಪಷ್ಟವಾಗಿ ತಿಳಿಸಿದ್ದಾರೆ ಎಂದು ಸಚಿವ ಈಶ್ವರ್‌ಖಂಡ್ರೆ ಹೇಳಿದರು.

ಸಿದ್ಧಗಂಗಾ ಮಠದಲ್ಲಿ ಶಿವಕುಮಾರ ಶ್ರೀಗಳನ್ನು ಭೇಟಿ ಮಾಡಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ವೀರಶೈವ ಲಿಂಗಾಯತರಲ್ಲಿ ಯಾವುದೇ ಭೇದ ಭಾವವಿಲ್ಲ ನಾವೆಲ್ಲಾ ಒಟ್ಟಾಗಿ ಕುಳಿತುಕೊಂಡು ಮಾತನಾಡುತ್ತೇವೆ. ಸಚಿವರರಾದ ಎಂ.ಬಿ ಪಾಟೀಲ್ ಅವರನ್ನೂ ಗಣನೆಗೆ ತೆಗೆದುಕೊಂಡು ಶೀಘ್ರವೇ ಗೊಂದಲ ಬಗೆಹರಿಸಿಕೊಳ್ಳುತ್ತೇವೆ. ವೀರಶೈವ ಲಿಂಗಾಯತ ಇಬ್ಬರೂ ಒಂದೇ ಮುಖ್ಯಮಂತ್ರಿಗಳೂ ಕೂಡ ಸ್ಪಂದಿಸಿದ್ದಾರೆ. ನೀವೆಲ್ಲರೂ ಒಗ್ಗೂಡಿ ಬಂದರೆ ನಿಮ್ಮ ಮನವಿ ಪುರಸ್ಕರಿಸುತ್ತೇವೆ ಎಂದಿದ್ದು, ಎಲ್ಲರೂ ಒಟ್ಟಾಗಿ ಚರ್ಚಿಸಲಿದ್ದೇವೆ ಎಂದರು.

ಅನುಭವ ಅಪಾರ: ಅಖಿಲ ಭಾರತ ವೀರಶೈವ ಮಹಾಸಭಾಕ್ಕೆ 125 ವರ್ಷಗಳ ಇತಿಹಾಸವಿದೆ. ಸಿದ್ಧಗಂಗಾ ಶ್ರೀಗಳು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ ಅನುಭವವೂ ಅವರಿಗಿದೆ. ವೀರಶೈವ ಲಿಂಗಾಯತ ಒಂದೇ ಎಂದು 2012 ರಲ್ಲೇ ಕೇಂದ್ರಕ್ಕೆ ಪ್ರಸ್ತಾವ ಕಳಿಸಿದ್ದು ಅಂತಿಮವಾಗಿಲ್ಲ. ಈಗಿರುವಾಗ ಅದು ತಿರಸ್ಕಾರವಾಗಿದೆ ಎಂದು ಹೇಳುವುದು ಸರಿಯಲ್ಲ. ಅಖಿಲ ಭಾರತ ವೀರಶೈವ ಮಹಾಸಭಾ ಎಲ್ಲರನ್ನೂ ಒಗ್ಗೂಡಿಸುವ ಉದ್ದೇಶ ಹೊಂದಿದ್ದು, ಸದ್ಯದ ಗೊಂದಲಗಳಿಗೆ ಶೀಘ್ರವೇ ತೆರೆಬೀಳಲಿದೆ ಎಂದು ತಿಳಿಸಿದರು.

ಗೊಂದಲಕ್ಕೆ ತೆರೆ: ಹಳ್ಳಿ ಭಾಗದ ಜನರು ಲಿಂಗಾಯತ, ಪಟ್ಟಣ ಭಾಗದಲ್ಲಿ ವೀರಶೈವ ಎಂದು ಕರೆಯ ತ್ತಾರೆ. ಎರಡು ಸಮನಾಂತರ ಪದಗಳೇ. ಸಮಾಜದಲ್ಲಿ ಭಿನ್ನ ವಾತಾವರಣ ಕಡಿಮೆ ಮಾಡಲು ಚರ್ಚೆಗೆ ಕರೆಯಲಾಗಿದೆ. ಶಾಮನೂರು ಶಿವಶಂಕರಪ್ಪನವರು ಚರ್ಚೆ ನೇತೃತ್ವ ವಹಿಸಲಿದುದ, ವೀರಶೈವ-ಲಿಂಗಾಯತ ಎರಡು ಒಂದೇ ಎಂದು ಶ್ರೀಗಳು ತಿಳಿಸಿದ್ದು, ಮುಂದಿನ ದಿನಗಳಲ್ಲಿ ಎಲ್ಲವೂ ಸರಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಲಿಂಗಾಯತ-ವೀರಶೈವ ಪ್ರತ್ಯೇಕ ಧರ್ಮ ವಿಚಾರವಾಗಿ ಗರಿಗೆದರಿದ್ದ ಚರ್ಚೆ ವಿಚಾರವಾಗಿ ಸಚಿವ ಎಂ.ಬಿ ಪಾಟೀಲ್ ಹೇಳಿಕೆಗೆ, ಸಿದ್ಧಗಂಗಾ ಮಠದಿಂದ ಎರಡನೇ ಪತ್ರ ಬಿಡುಗಡೆ ಮಾಡಲಾಗಿದ್ದು, ಎಂ.ಬಿ ಪಾಟೀಲ್ ಅವರು ನಮ್ಮ ಜತೆ ಮಾತನಾಡಿರುವುದನ್ನು ತಿರುಚಿದ್ದಾರೆ ಎಂದು ಪತ್ರದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಚಿವರ ಚರ್ಚೆ

ವೀರಶೈವ-ಲಿಂಗಾಯತ ಪ್ರತ್ಯೇಕ ಧರ್ಮ ವಿಚಾರ ಕುರಿತು ಸಿದ್ಧಗಂಗಾ ಮಠದಲ್ಲಿ ಮಂಗಳವಾರ ಸಂಜೆ ಶಾಮನೂರು ಶಿವಶಂಕರಪ್ಪ, ಸಚಿವ ಈಶ್ವರ ಕಂಡ್ರೆ ಸೇರಿದಂತೆ ವೀರಶೈವ ಮಹಾಸಭಾದ ಹಲವು ಮುಖಂಡರು ಸೇರಿ ಮಹತ್ವದ ಸಭೆ ನಡೆಸಿ. ಸಿದ್ಧಗಂಗಾ ಶ್ರೀಗಳ ಜೊತೆ ಸುಮಾರು ಮುಕ್ಕಾಲು ತಾಸು ಚರ್ಚೆ ನಡೆಸಿದರು.

ಶ್ರೀಗಳನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದು, ಸಚಿವ ಎಂ.ಬಿ ಪಾಟೀಲ್ ಅವರ ಹೇಳಿಕೆಗೆ ಶ್ರೀಗಳೇ ಸ್ಪಷ್ಟೀಕರಣ ನೀಡಿದ್ದಾರೆ. ಸಿದ್ಧಗಂಗಾ ಶ್ರೀಗಳೇ ನಮಗೆ ಸುಪ್ರೀಂ ಇದ್ದ ಹಾಗೆ. ಅವರ ಹೇಳಿಕೆಯೇ ಅಂತಿಮ. ಎಲ್ಲ ಗೊಂದಲಗಳಿಗೂ ಶೀಘ್ರ ತೆರೆ ಎಳೆಯುತ್ತೇವೆ.

ಶಾಮನೂರು ಶಿವಶಂಕರಪ್ಪ ವೀರಶೈವ ಮಹಾಸಭಾ ಅಧ್ಯಕ್ಷ

ಸಮಾಜದಲ್ಲಿ ಭಿನ್ನ ವಾತಾವರಣ ಕಡಿಮೆ ಮಾಡಲು ಎಲ್ಲರನ್ನೂ ಚರ್ಚೆಗೆ ಕರೆಯಲಾಗಿದೆ. ಎಂ.ಬಿ ಪಾಟೀಲ್ ಅವರೊಂದಿಗೂ ಮಾತನಾಡಲಿದ್ದು ಅವರಿಗೆ ಮನವರಿಕೆ ಮಾಡಿಕೊಡಲಾಗುವುದು. ಇದಕ್ಕೂ ರಾಜಕೀಯಕ್ಕೂ ಯಾವುದೇ ಸಂಬಂಧ ಇಲ್ಲ.

ಈಶ್ವರ್ ಖಂಡ್ರೆ ಪೌರಾಡಳಿತ ಸಚಿವ

ಸಮಾಜದಲ್ಲಿ ಬಹಳಷ್ಟು ಗೊಂದಲ ಉಂಟಾಗುತ್ತಿದೆ. ಹಿಂದಿನಿಂದಲೂ ವೀರಶೈವ ಲಿಂಗಾಯತ ಒಟ್ಟಾಗಿ ಹೋಗುವುದು ಪ್ರತಿಯೊಬ್ಬರ ಅಪೇಕ್ಷೆಯಾಗಿದ್ದು, ಸಂಘಟನಾತ್ಮಕವಾಗಿ ಜತೆಗೆ ಇರಬೇಕಿರುವ ಅವಶ್ಯವಿದೆ.

ಸಿದ್ಧಲಿಂಗ ಸ್ವಾಮಿಗಳು ಸಿದ್ಧಗಂಗಾ ಮಠದ ಕಿರಿಯ ಸ್ವಾಮೀಜಿ

ಪ್ರಕಟಣೆಯಲ್ಲಿ ಏನಿದೆ?



ಶ್ರೀ ಶ್ರೀ ಶಿವಕುಮಾರಸ್ವಾಮಿಗಳು
ಶ್ರೀ ಸಿದ್ಧಗಂಗಾ ಮಠ
ಕಾಯಕವೇ ಕೈಲಾಸ
2282211 2282411 Fax 0816 : 2282511
E-mail : ssmath_swamigalu@yahoo.in
ಕ್ರ.ಸಂಖ್ಯೆ : 682/2017-18
ದಿನಾಂಕ : 12/9/2017

ಪ್ರಕಟಣೆಗಾಗಿ

ದಿನಾಂಕ 10-09-2017 ರಂದು ಕರ್ನಾಟಕ ರಾಜ್ಯದ ಮಾನ್ಯ ನೀರಾವರಿ ಸಚಿವರಾದ ಶ್ರೀ ಎಂ. ಬಿ. ಪಾಟೀಲ್‌ರವರು ನಮ್ಮನ್ನು ಭೇಟಿಯಾಗಿ ವೀರಶೈವ-ಲಿಂಗಾಯತ ಸ್ವತಂತ್ರ ಧರ್ಮದ ಬಗ್ಗೆ ಪ್ರಸ್ತಾಪಿಸಿದಾಗ ನಾವು ಪ್ರತಿಕ್ರಿಯಿಸಿ ನಗರ- ಪಟ್ಟಣ ಪ್ರದೇಶಗಳಲ್ಲಿ ವಾಸಿಸುವ ವಿದ್ಯಾವಂತರು "ವೀರಶೈವ" ಪದ ಮತ್ತು ಹಳ್ಳಿಗಳಲ್ಲಿ ವಾಸಿಸುವವರು "ಲಿಂಗಾಯತ" ಪದ ಬಳಸುತ್ತಾರೆ. ಇವೆರಡು ಪದಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ . ಎರಡು ಪದಗಳು ಒಂದೇ, ಒಂದು ವೇಳೆ ಭಿನ್ನಾಭಿಪ್ರಾಯವಿದ್ದರೆ ಆದರೆ ಧಾರ್ಮಿಕ ಮುಖಂಡರು ಮತ್ತು ಸಮಾಜದ ಮುಖಂಡರೊಂದಿಗೆ ಚರ್ಚಿಸಿ ತೀರ್ಮಾನಿಸುವುದು ಒಳಿತು ಎಂದು ತಿಳಿಸಿದ್ದೆವು.

ಆದರೆ ಮಾನ್ಯ ಸಚಿವರು ನಮ್ಮ ಹೇಳಿಕೆಯನ್ನು ಸರಿಯಾಗಿ ಅರ್ಥೈಸಿಕೊಳ್ಳದೇ ತಿರುಚಿ ಲಿಂಗಾಯತ ಧರ್ಮದ ಪರವಾಗಿದ್ದಾರೆ ಎಂದು ಮಾಧ್ಯಮಕ್ಕೆ ಹೇಳಿಕೆ ಕೊಟ್ಟಿರುವುದು ದುರದೃಷ್ಟಕರ ಮತ್ತು ಇದು ಅಪ್ರಸ್ತುತ . ಒಂದು ವೇಳೆ ವೀರಶೈವ- ಲಿಂಗಾಯತ ಸಮಾಜವನ್ನು ಇಬ್ಭಾಗ ಮಾಡಲು ಯಾರೇ ಪ್ರಯತ್ನ ಮಾಡಿದರೂ ಅದು ಸಮಾಜಕ್ಕೆ ಒಳಿತಲ್ಲ . ಆದುದರಿಂದ ವೀರಶೈವ- ಲಿಂಗಾಯತ ಪದಗಳು ಎರಡೂ ಒಂದೇ ಎಂದು ಈ ಮೂಲಕ ಸ್ಪಷ್ಟಪಡಿಸುತ್ತೇವೆ. ಸಮಾಜ ಕೂಡ ಇದೇ ಅಂತಿಮವೆಂದು ಭಾವಿಸುವುದು ಒಳಿತು.

ಸಚಿವ ಎಂ.ಬಿ ಪಾಟೀಲ್ ಅವರು ಸೆ, 10 ರಂದು ತಮ್ಮನ್ನು ಭೇಟಿ ಮಾಡಿ ವೀರಶೈವ - ಲಿಂಗಾಯತ ಸ್ವತಂತ್ರ ಧರ್ಮದ ಬಗ್ಗೆ ಪ್ರಸ್ತಾಪಿ ಸಿದ್ದರು. ಆಗ ನಾವು ಪ್ರತಿಕ್ರಿಯಿಸಿ ನಗರ ಪಟ್ಟಣ ಗಳಲ್ಲಿ ವಾಸಿಸುವ ವಿದ್ಯಾವಂತರು ವೀರಶೈವ ಪದ ಮತ್ತು ಹಳ್ಳಿಯಲ್ಲಿ ವಾಸಿಸುವವರು ಲಿಂಗಾಯತ ಪದ ಬಳಸುತ್ತಾರೆ ಎಂದು ತಿಳಿಸಿದ್ದೆವು. ಎರಡೂ ಪದಗಳಲ್ಲಿ ಯಾವುದೇ ವ್ಯತ್ಯಾಸ ಇಲ್ಲ, ಭಿನ್ನಾಬಿಪ್ರಾಯ ಇದ್ದಿದ್ದೇ ಆದರೆ ಧಾರ್ಮಿಕ, ಸಮಾಜದ ಮುಖಂಡರ ಜತೆ ಚರ್ಚಿಸಿ ತೀರ್ಮಾನಿಸುವುದು ಒಳಿತು ಎಂದು ತಿಳಿಸಿದ್ದೆವು ಎಂದು ಸ್ಪಷ್ಟಪಡಿಸಿದ್ದೆವು. ಸಚಿವರು ನಮ್ಮ ಹೇಳಿಕೆಯನ್ನು ಸರಿಯಾಗಿ ಅರ್ಥೈಸಿಕೊಳ್ಳದೇ ತಿರುಚಿ, ನಾವು ಲಿಂಗಾಯತ ಧರ್ಮದ ಪರವಾಗಿದ್ದೇವೆ ಎಂದು ಮಾಧ್ಯ ಮಕ್ಕೆ ಹೇಳಿಕೆ ಕೊಟ್ಟಿರುವುದು ದುರದೃಷ್ಟಕರ ಮತ್ತು ಅಪ್ರ ಸ್ತುತ. ಒಂದು ವೇಳೆ ವೀರಶೈವ ಲಿಂಗಾಯತ ಸಮಾಜವನ್ನು ಇಬ್ಭಾಗಕ್ಕೆ ಯಾರೇ ಪ್ರಯತ್ನಿಸಿದ್ದರೂ ಸಮಾಜಕ್ಕೆ ಅದು ಒಳಿತಲ್ಲ. ಆದ್ದರಿಂದ ವೀರಶೈವ ಲಿಂಗಾ ಯತ ಪದಗಳು ಎರಡೂ ಒಂದೇ. ಸಮಾಜ ಕೂಡ ಇದೇ ಅಂತಿಮ ಎಂದು ಭಾವಿಸುವುದು ಒಳಿತು. ಈ ಕುರಿತು ಅಖಿಲ ಭಾರತ ವೀರಶೈವ ಮಹಾಸಭೆ ನಿರ್ಣಯ ಸಹ ಸರಿ ಯಾದ ನಡೆ. ಅದನ್ನು ನಾವು ಕೂಡ ಪುಷ್ಟೀಕರಿಸುತ್ತೇವೆ ಎಂದು ಸ್ಪಷ್ಟಪಡಿಸಿದ್ದಾರೆ.

ಇದೇ ನನ್ನ ಉತ್ತರ...

ಲಿಂಗಾಯತ ಧರ್ಮದ ಕುರಿತು ಮಂಗಳವಾರ ನಡೆದ ಬೆಳವಣಿಗೆಗಳಿಂದ ಮನನೊಂದ ಸಚಿವ ಎಂ.ಬಿ.ಪಾಟೀಲ್ ಅವರು ಕೂಡಲಸಂಗಮಕ್ಕೆ ತೆರಳಿ ಧ್ಯಾನಾಸಕ್ತರಾದರು.

ಬೆಳಗಾವಿ ವಿಮಾನ ನಿಲ್ದಾಣ ಉದ್ಘಾಟನೆ ನಾಳೆ

ಬೆಳಗಾವಿ: ಸಾಂಬ್ರಾ ವಿಮಾನ ನಿಲ್ದಾಣವನ್ನು 142 ಕೋಟಿ ರು. ವೆಚ್ಚದಲ್ಲಿ ಮೇಲ್ದರ್ಜೆಗೇರಿಸಿದ್ದು, ಇದರ ಉದ್ಘಾಟನೆ ಸೆಪ್ಟೆಂಬರ್ 14ರಂದು 12.30ಕ್ಕೆ ನಡೆಯಲಿದೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಸಂಸದ ಸುರೇಶ ಅಂಗಡಿ ಮಾಹಿತಿ ನೀಡಿ, ವಿಮಾನ ನಿಲ್ದಾಣವನ್ನು ಕೇಂದ್ರ ವಿಮಾನ ಯಾನ ಸಚಿವ ಅಶೋಕ ಗಜಪತಿ ರಾಜು ಉದ್ಘಾಟಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವರಾದ ಅನಂತಕುಮಾರ, ಡಿ.ವಿ.ಸದಾನಂದಗೌಡ, ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವ ಆರ್.ವಿ. ದೇಶಪಾಂಡೆ, ಜಿಲ್ಲಾ ಉಸ್ತುವಾರಿ ಸಚಿವ ರಮೇಶ ಜಾರಕಿಹೊಳಿ, ಸಂಸದ ಸುರೇಶ ಅಂಗಡಿ, ರಾಜ್ಯಸಭಾ ಸದಸ್ಯ ಪ್ರಭಾಕರ ಕೋರೆ, ಶಾಸಕ ಸಂಜಯ ಪಾಟೀಲ, ಮೇಯರ್ ಸಂಜೋತಾ ಬಾಂದೇಕರ ಸೇರಿ ಗಣ್ಯರು ಭಾಗವಹಿಸಲಿದ್ದಾರೆ ಎಂದರು.